★★★

ಅವನ ಪಾಲಿಗೊಂದು ಹೊಸ ಬೆಳಗು. ಸ್ಲಂ ಕೂಡ ಎಂದಿಗಿಂತ ಶುಭ್ರವಾಗಿ ಗೋಚರಿಸುತ್ತಿತ್ತು. ಮುಖಕ್ಕೊಂದಿಷ್ಟು ನೀರು ತೋಕಿ, ಬಾಗಿಲಲ್ಲಿ ತೂಗಿಬಿದ್ದ ಗೋಣಿತಾಟು ಸರಿಸಿ ರಸ್ತೆಯತ್ತ ನೋಡಿದ. ಮಕ್ಕಳು ದುಂಡಗೆ ನಿಂತು ದಾರಿ ಬದಿಯಲ್ಲಿಯೆ ಜಳಕ ಮಾಡುತ್ತಿದ್ದವು. ಅದರಿಂದುಂಟಾದ ರಸ್ತೆಯ ಕೊಚ್ಚೆ ನೀರಲ್ಲಿ ಸೂರ್ಯ ಹೊಳೆಯುತ್ತಿದ್ದ. ಛೇ. ತಡವಾಗಿ ಹೋಯಿತು ಎಂದುಕೊಳ್ಳುತ್ತ, ದಡಬಡನೆ ಊರಿಗೆ ಹೊರಡುವ ತಯಾರಿ ನಡೆಸಿದ.

★★★

ಬಸ್ಸಿಳಿದವನಿಗೆ ಕಳೆದ ಹನ್ನೆರಡು ವರ್ಷಗಳಲ್ಲಿ ಊರು ಬಹಳ ಬದಲಾವಣೆ ಕಂಡಿದೆ ಅನ್ನುವುದು ಮೇಲ್ನೋಟಕ್ಕೆ ತಿಳಿಯುವಂತಿತ್ತು. ಹಳೆಯ ಮುರುಕಲು ಬಸ್‌ನಿಲ್ದಾಣದ ಬದಲಿಗೆ ಎರಡಂತಸ್ತಿನ ನಿಲ್ದಾಣದ ಕಟ್ಟಡ ಎದ್ದು ನಿಂತಿತ್ತು. ಹಳೆಯ ನಿಲ್ದಾಣದ ಹತ್ತಿರವಿದ್ದಿದ್ದ ಹೊಂಗೆ ಮರ ನಾಪತ್ತೆಯಾಗಿ ಅಲ್ಲೆಲ್ಲ ಗೂಡಂಗಡಿಗಳು ತಲೆಯೆತ್ತಿದ್ದವು. ಬಸ್ಸಿನಿಂದಿಳಿದು ಮುಂದೆ ಹೋಗಿ ಬಲಕ್ಕೆ ತಿರುಗುವ ಗಾಂಧಿಮಾರ್ಗ ಬಿಟ್ಟು ಎಡಗಡೆಗೆ ಕಿಲೋಮೀಟರಷ್ಟು ನಡೆದು ವಿವೇಕಾನಂದ ವೃತ್ತ ದಾಟಿ ಮುಂದೆ ಸಾಗಿದರೆ ಸಿಗುವುದು ಅವನ ಏರಿಯಾ. ನೆನಪೇನೊ ನಿಚ್ಚಳವಾಗಿತ್ತು. ಆದರೆ, ಸೀದಾ ಹೊರಡುವುದೆ? ಸಾಧ್ಯವಿಲ್ಲ! ಹೊಟ್ಟೆ ತಾಳ ಹಾಕುತ್ತ ಘರ್ಜಿಸಿತು. ತೀರಾ ಪರಿಚಿತವಾದ, ಬಸ್ ನಿಲ್ದಾಣದಿಂದ ಹೊರಬರುತ್ತಿದ್ದಂತೆ ತಾನು ಪದೇ ಪದೇ ನೋಡುತ್ತಿದ್ದ 'ಹೋಟೆಲ್ ಪ್ರಿಯ' ಈಗ ಪ್ರಿಯದರ್ಶಿನಿ ಎನ್ನುವ ಹೆಸರು ಹೊತ್ತು ನಿಂತದ್ದು ಕಾಣಿಸಿತು. ಒಳಹೊಕ್ಕು ಟೇಬಲೊಂದರ ಬಳಿ ಕುಳಿತು ಒಂದು ಪ್ಲೇಟು ಇಡ್ಲಿ, ಡಬಲ್‌ವಡೆ ಎಂದ. ಹಾಗೇ ಕ್ಯಾಶ್ ಕೌಂಟರಿನತ್ತ ಕಣ್ಣು ಹೊರಳಿತು... ಅರೆ! ಕೌಂಟರಿನಲ್ಲಿರುವವರು ಮಾರುತಿ ಕಾಮತರೇ, ಹೌದು ಹೌದು... ಇನ್ನೂ ಗಟ್ಟಿಯಾಗೇ ಇದ್ದಾರಲ್ಲ ಎನ್ನಿಸಿ ಅವರ ಬಳಿ ಹೋಗಿ, 'ನಮಸ್ಕಾರ, ಕಾಮತರೆ' ಎಂದ. ಪ್ರತಿ ಶುಕ್ರವಾರ ಇವರ ಹೋಟೆಲಿನ ಲಕ್ಷ್ಮಿಪೂಜೆಗೆ ತಾನೇ ಬರುತ್ತಿದ್ದವನಲ್ಲವೆ, ತನ್ನನ್ನವರು ಗುರುತು ಹಿಡಿದೇ ಹಿಡಿಯುತ್ತಾರೆ ಎನ್ನುವ ಭರವಸೆಯಲ್ಲಿ. ಅವನನ್ನೊಮ್ಮೆ ನೋಡಿದ ಕಾಮತರು 'ನೀವು?' ಎಂದರು. 'ಅಯ್ಯ, ತೀಳೀಲಿಲ್ಲವಾ, ನಿಮ್ಮ ಪೂಜೆಭಟ್ಟರು... ಕೊಲೆ ಆಪಾದನೆ ಮೇಲೆ ಪೊಲೀಸರು ಹಿಡಿದುಕೊಂಡು ಹೋಗಿದ್ದರಲ್ಲ, ಬಿಡುಗಡೆ ಆಯ್ತು, ಹುಟ್ಟಿದ ಮಣ್ಣು ಮರೆಯೋಕಾಗುತ್ತ, ಬಂದುಬಿಟ್ಟೆ. ಹೆಹೆ... ಹೇಗಿದೆ ವ್ಯಾಪಾರ... ಮತ್ತೆ ನೀವು ಟೀವಿಯಲ್ಲಿಯು ಮೊನ್ನೆ ಮೊನ್ನೆ... ನನ್ನನ್ನ ನೋಡಿರಬಹುದು...' ಎಂದು ಆರಂಭಿಸುವಷ್ಟರಲ್ಲಿ ಕಳೆಗಟ್ಟಿದ ಮುಖದ ಕಾಮತರು ಗೊಂದಲಗೊಳ್ಳುತ್ತಿರುವಂತೆ ಬೇರಾರೋ ಗಿರಾಕಿಗಳು ಬಂದದ್ದೆ ಅವರಿಗೆ ವರದಾನವಾಗಿ ಅವರಲ್ಲಿ ಬೇರಾವುದೋ ಸುದ್ದಿ ಎತ್ತಿದರು. ಅರ್ಥ ಮಾಡಿಕೊಂಡವನಂತೆ ತನಗಾಗಿ ಕಾಯುತ್ತಿದ್ದ ಇಡ್ಲಿ ಪೇಟಿನ ಬಳಿ ಬಂದವನು ಓರೆಗಣ್ಣಿನಿಂದ ನೋಡಿದರೆ ಗಡ್ಡಧಾರಿ ಗಿರಾಕಿಯೊಬ್ಬನಿಗೆ ತನ್ನನ್ನೆ ತೋರಿಸುತ್ತ ಏನನ್ನೋ ಹೇಳುತ್ತಲಿರುವ ಕಾಮತರು. ತಿಂಡಿ ತಿಂದು ವಿಚಾರಿಸಿಕೊಳ್ಳುವ ಎಂದು ಗಬಗಬನೆ ತಿಂದು ಮುಗಿಸಿ ಮೇಲೊಂದು ಬಿಸಿ ಚಹಾ ಹೊಯ್ದು ಬಿಲ್ಲು ಹಿಡಿದ ಕೌಂಟರಿನ ಬಳಿ ಬಂದರೆ ಅಲ್ಲಿ ಕಾಮತರಿರಲಿಲ್ಲ. ಬೇರೊಬ್ಬ ಹುಡುಗ ಕುಳಿತಿದ್ದ. ಏನೂ ಹೇಳುವ ಮನಸ್ಸಾಗದೆ ಬಿಲ್ಲನ್ನ ಟೇಬಲಿನ ಮೇಲಿಟ್ಟು ಹಣ ತೆಗೆಯಹೋದರೆ, ಹುಡುಗ ಹಲಾಪು ಪ್ಲೇಟೊಂದರ ಮೇಲೆ ದಬ್ಬಣದಂತೆ ನೆಟ್ಟ ಸರಳಿಗೆ ಬಿಲ್ಲು ಸಿಗಿಸಿ, 'ನೀವು ದುಡ್ಡು ಕೊಡುವುದು ಬೇಡವಂತೆ, ಕಾಮತರು ಹೇಳಿ ಹೋಗಿದ್ದಾರೆ' ಎಂದವನೆ ಅಲ್ಲಿಂದ ಜಾಗ ಖಾಲಿ ಮಾಡಿದ. ಆತ ಹಿಂದೆ ಹಿಂದೆ ಸರಿದು ಹೋಗುವ ಬಗೆ ನೋಡಿಯೇ ಬೇಸರವಾಯಿತು. ಹಾಗೇ ನೆನಪೊಂದು ಹಾದುಹೋಯಿತು–ಸಣ್ಣವನಿದ್ದಾಗ ಕಂಡಂತೆ ಈಗ ಹೋಟೆಲಿದ್ದ ಜಾಗದಲ್ಲಿ ಆಗೆಲ್ಲ ಜಾಲಿಗಿಡಗಳ ಹಿಂಡಿತ್ತು. ಆಡುವಾಗ ಅದರ ಮುಳ್ಳು ಕಾಲಿಗೆ ಚುಚ್ಚಿ